ಶ್ರೀ ಜೆ. ಎಸ್. ದೇಶ್‌ಮುಖ್.—ಸಮಿತಿಯನ್ನು ಮಾಡುತ್ತೇವೆ.

ಖನಿಜ ಕಲ್ಲು ಸಂಪತ್ತುಳ್ಳ ಭೂಮಿಯನ್ನು ಖಾಸಗಿಯವರಿಗೆ ಕೊಟ್ಟಿರುವ ವಿಚಾರ

೯೫೫ (೪೧೨) ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ). —ಮಾನ್ಯ ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಜ್ಯ ಸರ್ಕಾರವು ೧೯೫೫-೫೬ ಮತ್ತು ೧೯೫೬-೫೭ನೇ ಸಾಲಿನಲ್ಲಿ ಸರ್ಕಾರಿ ಒಡೆತನದ ಖನಿಜ, ಕಲ್ಲು ಮತ್ತಿತರೇ ಸಂಪತ್ತುಳ್ಳ ಖನಿಜ ಭೂಮಿಯನ್ನು ಎಷ್ಟು ಜನ ಖಾಸಗಿಯವರಿಗೆ ಮಂಜೂರು ಮಾಡಿದೆ ?

ಆ) ಜಿಲ್ಲಾವಾರು ಅಂಕಿ ಅಂಶಗಳನ್ನು ಕೊಡುವುದು?

ಶ್ರೀ ಜೆ.ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಸಚಿವರು).—

ಅ) ೧೯೫೫-೫೬ನೇ ಸಾಲಿನಲ್ಲಿ ಗಣಿ ಗುತ್ತಿಗೆಯಡಿಯಲ್ಲಿ ೩೧ ಗುತ್ತಿಗೆಗಳನ್ನು ಮಂಜೂರು ಮಾಡಿದೆ. ಮತ್ತು ೧೫೧ ಕಲ್ಲು ಗಣಿ ಗುತ್ತಿಗೆಗಳನ್ನು ಕೊಡಲಾಗಿದೆ.

ಆ) ೧೯೫೬-೫೭ನೇ ಸಾಲಿನಲ್ಲಿ ೮ ಗಣಿ ಗುತ್ತಿಗೆಗಳನ್ನು ಮತ್ತು ೧೭೫ ಕಲ್ಲು ಗಣಿ ಗುತ್ತಿಗೆಗಳನ್ನು ಕೊಡಲಾಗಿದೆ. ಜಿಲ್ಲಾವಾರು ಅಂಕಿ ಅಂಶಗಳ ಪಟ್ಟಿಯನ್ನು ಲಗತ್ತಿಸಿದೆ.

ಖಾಸಗಿದಾರರಿಗೆ ಸರ್ಕಾರಿ ಜಮೀನಿನಲ್ಲಿ ಕೊಟ್ಟಿರುವ ಗುತ್ತಿಗೆ ಹಾಗೂ ಕಲ್ಲು ಗಣಿ ಗುತ್ತಿಗೆಗಳ ಪಟ್ಟಿ

ಸಂಖ್ಯೆ	ಜಿಲ್ಲೆ	೧೯೫೫-೫೬				೧೯೫೬-೫೭			
		ಗಣಿ ಗುತ್ತಿಗೆ		ಕಲ್ಲು ಗಣಿಗುತ್ತಿಗೆ		ಗಣಿ ಗುತ್ತಿಗೆ		ಕಲ್ಲು ಗಣಿಗುತ್ತಿಗೆ	
		ಸ.ಜ	ಖಾ.ಜ	ಸ.ಜ	ಖಾ.ಜ	ಸ.ಜ	ಖಾ.ಜ	ಸ.ಜ	ಖಾ.ಜ
೧.	ಬೆಂಗಳೂರು	೧	—	೧೩	೩	—	—	೪೮	—
೨.	ಬಳ್ಳಾರಿ	೧	—	೭	—	—	—	೮	—
೩.	ಬೆಳಗಾಂ	—	೨	೧೨	—	—	—	೮	—
೪.	ಬಿಜಾಪುರ	—	೧	೬	—	—	೧	೫	—
೫.	ಬೀದರ್	—	೧	—	—	—	—	೧	—
೬.	ಚಿತ್ರದುರ್ಗ	೩	೨	೫	—	—	೧	೭	—
೭.	ಚಿಕ್ಕಮಗಳೂರು	—	—	೫	—	—	—	೩	—
೮.	ಕೊಡಗು	—	—	—	—	—	—	೨	—
೯.	ಧಾರವಾಡ	೧	—	೩	—	—	—	೮	—
೧೦.	ಗುಲ್ಬರ್ಗಾ	೧	೫	೧೦	—	—	೧	೧೪	—
೧೧.	ಹಾಸನ	—	—	೧	—	—	—	೧	—
೧೨.	ಕೋಲಾರ	—	—	೮	—	—	—	೬	—
೧೩.	ಮಂಡ್ಯ	೧	—	೨	—	—	—	೭	—
೧೪.	ಮೈಸೂರು	—	೧	೬	೧	—	—	೨	—
೧೫.	ಉತ್ತರ ಕನ್ನಡ	೨	—	೪	—	—	೧	೧	—
೧೬.	ರಾಯಚೂರು	—	೧	—	—	—	೧	೨	—
೧೭.	ಶಿವಮೊಗ್ಗ	—	—	೫	—	—	—	೫	—
೧೮.	ದಕ್ಷಿಣ ಕನ್ನಡ	೩	೧	೫೩	—	—	೧	೪೪	—
೧೯.	ತುಮಕೂರು	೪	—	೯	—	೨	—	೩	—
	ಒಟ್ಟು ಮೊತ್ತ	೧೭	೧೪	೧೪೭	೪	೨	೬	೧೭೫	—
	ಒಟ್ಟು ಮೊತ್ತ	೩೧		೧೫೧		೮		೧೭೫	—

ಶ್ರೀ ಡಿ.ಜಿ. ಬಸವನಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟಿರುವ ಉತ್ತರವನ್ನು ನೋಡಿದರೆ, ನಮ್ಮ ರಾಜ್ಯದ ವಿಸ್ತೀರ್ಣಕ್ಕೆ ಈಗ ಕೊಟ್ಟಿರುವ ಗುತ್ತಿಗೆಯು ಏನೇನೂ ಸಾಲದು. ನನಗೆ ಗೊತ್ತಿದ್ದ ಮಾಹಿತಿ ಪ್ರಕಾರ ನಮ್ಮ ರಾಜ್ಯದಲ್ಲಿ ೨೫ ಸಾವಿರ ಚದುರ ಕಿಲೋಮೀಟರ್ ಗ್ರಾನೈಟ್ ಸಂಗ್ರಹವಾಗಿದೆ. ಸರ್ಕಾರಿ ಒಡೆತನದ ಹಾಗೂ ಖಾಸಗಿ ವಲಯಗಳಿಗೆ ಕೊಟ್ಟಿರತಕ್ಕ ಗುತ್ತಿಗೆ ೮೦೦ ಚದುರ ಕಿಲೋಮೀಟರ್ ಮಾತ್ರ. ಗ್ರಾನೈಟ್ ಕಲ್ಲುಗಳಿಗೆ ಹೊರದೇಶಗಳಲ್ಲಿ ಅಲಂಕಾರ ವಸ್ತುಗಳನ್ನು ತಯಾರು ಮಾಡುವುದಕ್ಕೆ ಬಹಳ ಬೇಡಿಕೆ ಇದೆ. ಯಾವುದೇ ಸಂಸ್ಥೆಗಾಗಲೀ ಇವರು ಗ್ರಾನೈಟ್ ತೆಗೆಯುವುದಕ್ಕೆ ಗುತ್ತಿಗೆಯನ್ನು ಕೊಡುವುದು ಒಳ್ಳೆಯದು. ಇದರಿಂದ ನಮ್ಮ ರಾಜ್ಯಕ್ಕೂ ಹೆಚ್ಚಿಗೆ ಹಣ ಬರುತ್ತದೆ. ಹೊರದೇಶಗಳಿಂದಲೂ ಸಹಾ ಗ್ರಾನೈಟ್‌ಗಳಿಗೆ ಬಹಳ ಬೇಡಿಕೆ ಇದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಎಸ್. ದೇಶ್‌ಮುಖ್.—ಮಾನ್ಯ ಅಧ್ಯಕ್ಷರೇ, ನಾವು ಈಗಾಗಲೇ ಗ್ರಾನೈಟ್‌ಗಳನ್ನು ತೆಗೆಯುವುದಕ್ಕೆ ೩,೩೩೧ ಹೆಕ್ಟೇರ್‌ನಷ್ಟು ಭೂಮಿಯನ್ನು ಗುತ್ತಿಗೆ ಕೊಟ್ಟಿದ್ದೇವೆ. ಸರ್ಕಾರಕ್ಕೆ ಇದರಿಂದ ಈಗಾಗಲೇ ಆದಾಯ ಬರುತ್ತಿದೆ. ಮಾನ್ಯ ಸದಸ್ಯರು ಇನ್ನೂ ಹೆಚ್ಚು ಗುತ್ತಿಗೆಯನ್ನು ಕೊಡಬೇಕೆಂದು ಹೇಳಿದ್ದಾರೆ. ಈ ವಿಷಯ ಸರ್ಕಾರದ ಮುಂದೆ ಇದೆ. ಆದಷ್ಟು ಬೇಗ ಇದರ ಬಗ್ಗೆ ವಿಚಾರ ಮಾಡುತ್ತೇನೆ.

ಚುಕ್ಕೆ ಪ್ರಶ್ನೆ ಸಂಖ್ಯೆ : ೯೬ (೨೮೫)

(ಮಾನ್ಯ ಸದಸ್ಯರಾದ ಶ್ರಿ ಚಂದ್ರಶೇಖರ್ ಮಾಮನಿಯವರು ಗೈರು ಹಾಜರಾಗಿದ್ದರು)

(ಚುಕ್ಕೆ ಪ್ರಶ್ನೆ ಸಂಖ್ಯೆ : ೯೭ (೩೯೦)

ಶ್ರೀ ಜೆ.ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯು ಲೇಬರ್ ಡಿಪಾರ್ಟ್‌ಮೆಂಟಿಗೆ ಹೋಗಬೇಕಾಗಿದ್ದು, ನನಗೆ ಬಂದು ಬಿಟ್ಟಿದೆ, ಇದು ಶುಗರ್ ಇಂಡಸ್ಟ್ರೀಗೆ ಬಗ್ಗೆ ಹೇಳಬೇಕಾಗುತ್ತದೆ. ತಪ್ಪಾಗಿ ನನ್ನ ಬಳಿ ಬಂದಿದೆ. ತಾವು ಇವನ್ನು ವಿತ್‌ಹೋಲ್ಡ್ ಮಾಡಬೇಕು.

ಅಧ್ಯಕ್ಷರು.—ಈ ಪ್ರಶ್ನೆಯನ್ನು ವಿತ್‌ಹೋಲ್ಡ್ ಮಾಡಲಾಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ವಿದ್ಯುದ್ದೀಕರಣ ಹೊಂದದ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ಬಗ್ಗೆ

ಸವದತ್ತಿ ತಾಲ್ಲೂಕು

೯೬ (೨೮೫) ಶ್ರೀ ಚಂದ್ರಶೇಖರ ಮಾಮನಿ (ಸವದತ್ತಿ).—ಮಾನ್ಯ ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಸವದತ್ತಿ ತಾಲ್ಲೂಕಿನ ವಿದ್ಯುದ್ದೀಕರಣ ಹೊಂದದ ಗ್ರಾಮಗಳ ಸಂಖ್ಯೆ ಎಷ್ಟು ಹಾಗೂ ಅಂತಹ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಯಾವಾಗ ಒದಗಿಸಲಾಗುವುದು ?

ಆ) ಸವದತ್ತಿ ತಾಲ್ಲೂಕಿನ ಎಷ್ಟು ಗ್ರಾಮಗಳ ಹರಿಜನ ಹರಿಜನ-ಗಿರಿಜನ ಕಾಲೋನಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕಾಗಿದೆ ಹಾಗೂ ಅಂತಹ ಕಾಲೋನಿಗಳಿಗೆ ವಿದ್ಯುಚ್ಛಕ್ತಿಯನ್ನು ಯಾವಾಗ ಒದಗಿಸಲಾಗುವುದು ?

ಇ) ಸರ್ಕಾರದ ಭಾಗ್ಯಜ್ಯೋತಿ ಯೋಜನೆಯ ಆಡಿಯಲ್ಲಿ ಸದರಿ ತಾಲ್ಲೂಕಿನ ಎಲ್ಲಾ ಹಳ್ಳಿಗಳಿಗೆ ವಿದ್ಯುತ್ ದೀಪಗಳನ್ನು ಒದಗಿಸಲಾಗಿದೆಯೇ, ಹಾಗಿಲ್ಲದಿದ್ದಲ್ಲಿ ಯಾವಾಗ ಒದಗಿಸಲಾಗುವುದು ?

ಈ) ತಾಲ್ಲೂಕಿನಲ್ಲಿ ಈ ಯೋಜನೆಯ ಲಾಭ ಪಡೆದ ಗ್ರಾಮಗಳೆಷ್ಟು ಮತ್ತು ಫಲಾನುಭವಿಗಳ ಸಂಖ್ಯೆ ಎಷ್ಟು ಹಾಗೂ ಗ್ರಾಮಪಾಲು ಪ್ರಕಾರ ಲಾಭ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಎಲ್ಲಾ ಗ್ರಾಮಗಳಿಗೂ ವಿದ್ಯುಚ್ಛಕ್ತಿ ಸಂಪರ್ಕವನ್ನು ಒದಗಿಸಲಾಗಿದೆ.

ಆ) ಎಲ್ಲಾ ಹರಿಜನ ಗಿರಿಜನ ಕಾಲೋನಿಗಳಿಗೆ ವಿದ್ಯುತ್ ಒದಗಿಸಲಾಗಿದೆ.

ಇ) ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುಚ್ಛಕ್ತಿ ಒದಗಿಸಬೇಕಾದ ಗ್ರಾಮಗಳಿಲ್ಲ.

ಈ) ವಿವರ ಅನುಬಂಧದಲ್ಲಿ ಇಡಲಾಗಿದೆ.